**<u>ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.</u>**

ಸಿ.ಸಿ.ನಂ. 3662-2022

ಪಿಡಬ್ಲ್ಯೂ -03

ಸಿಡಬ್ಲ್ಯೂ-02

ಸಾಕ್ಷಿದಾರನ ಹೆಸರುಃ- ರಂಗಸ್ವಾಮಿ ಎ.ಎಸ್.

ತಂದೆಯ ಹೆಸರು ಶಿವಣ್ಣಗೌಡ

ವಯಸ್ಸು 41 ವರ್ಷ

ಉದ್ಯೋಗ ಪೊಲೀಸ್ ಪೇದೆ

ವಾಸ ಕುಣಿಗಲ್ ಪೊ. ಠಾಣೆ

**<u>ಸಾಕ್ಷಿಗೆ ದಿಃ 23.06.2025 ರಂದು ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

2014 ರಿಂದ 2021 ರವರೆ ನಾನು ಹು.ದುರ್ಗ ಪೋ ಠಾ. ಯಲ್ಲಿ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 20.04.2021 ರಂದು ನಾನು ಠಾಣೆಯಲ್ಲಿ ಇರುವ ನನಗೆ ಚಾಸಾ 1 ಮತ್ತು 3 ಅವರಿಗೆ ಕೋವಿಡ್ 19 ಇಡಿ ದೇಶದಲ್ಲಿ ಹರಡುತ್ತಿದ್ದು ಸಾರ್ವಜನಿಕರಿಗೆ ಮತ್ತು ವ್ಯಾಪಾರಸ್ಥರಿಗೆ ಸರ್ಕಾರದ ಆದೇಶ ಪಾಲನೆ ಮಾಡಿದಿದ್ದರೆ ಅವರನ್ನು ಹುಡುಕಿ ಕಾನೂನಿನ ರೀತಿ ಕ್ರಮ ಜರುಗಿಸುವಂತೆ ಸೂಚಿಸಿದ್ದು ಈ ಸೂಚನೆ ಮೇರೆಗೆ ನಾನು ಚಾಸಾ 1 ಮತ್ತು 3 ಅವರೊಂದಿಗೆ ಹು.ದುರ್ಗ ಟೌನ್ ಗಸ್ತು ಕರ್ತವ್ಯದಲ್ಲಿದ್ದಾಗ ಕೊಡವತ್ತಿ ಕ್ರಾಸ್ ಹತ್ತಿರ ದರ್ಶಿತ್ ಬಾರ್ ಆಂಡ್ಯ ರೇಸ್ಟೂರೇಂಟ್ ನಲ್ಲಿ ರಾತ್ರಿ 8.30 ಗಂಟೆಯ ಸಮಯದಲ್ಲಿ ಒಳಗಡೆ ಹೋದಾಗ ನಿಂಜರಾಜು ತಂದೆ ರಾಜಣ್ಣ ಅವರು ಕ್ಯಾಷಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದು ಕೋವಿಡ್ ನ ಮಾರ್ಗಸೂಚಿ ಜಾರಿ ಇದ್ದರು ಯಾವುದೇ ಅಂತರ ಕಾಪಾಡದೆ ಮಾಸ್ ಧರಿಸಿದ 5-6 ಜನ ಒಳಗಡೆ ಕುಳಿತು ಮದ್ಯ ಸೇವನೆ ಮಾಡುತ್ತಿದ್ದರು. ಮತ್ತು ಸರ್ಕಾರದ ಆದೇಶ ಉಲ್ಲಂಘನೆ ಮಾಡಿರುತ್ತಾರೆ. ಚಾಸಾ1 ಅವರು ಚಾಸಾ 3 ಅವರಿಗೆ ವಿಡಿಯೋ ಮಾಡಲು ಹೇಳಿದ್ದು ಅವರು ಮಾಡಿರುತ್ತಾರೆ, ಆರೋಪಿಯನ್ನು ಗುರುತಿಸುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರಃ ಎನ್.ವಿ. ವಕೀಲರಿಂದಃ</u>**

ನಮ್ಮ 3 ಜನರಿಗೆ ಗಸ್ತು ಕರ್ತವ್ಯಕ್ಕೆ ನೇಮಿಸಿದ್ದರು. ಗಸ್ತನ್ನು ಹು.ದುರ್ಗ ಟೌನ್ ನಲ್ಲಿ ಮಾಡುವಂತೆ ನೇಮಿಸಿದ್ದರು. ರೋಲ್ ಕಾಲ್ ಡೈರಿಯನ್ನು ಹಾಜರುಪಡಿಸಿರುವುದಿಲ್ಲ. ಸಂಜೆ 6.30 ಗಂಟೆಯ ಸಮಯದಲ್ಲಿ ಗಸ್ತಿಗೆ ನೇಮಿಸಿರುತ್ತಾರೆ.

ದರ್ಶಿತ್ ಬಾರ್ ಆಂಡ್ಯ ರೇಸ್ಟೂರೇಂಟ್ ನಮ್ಮ ಠಾಣೆಯಿಂದ 100 - 200 ಮೀಟರ ದೂರದಲ್ಲಿದೆ ಎಂದರೆ ಸಾಕ್ಷಿ 500 ಮೀಟರ ದೂರದಲ್ಲಿದೆ ಎಂದು ಹೇಳುತ್ತಾರೆ. ದರ್ಶಿತ್ ಬಾರ್ ಆಂಡ್ಯ ರೇಸ್ಟೂರೇಂಟ್ 3 ಮಹಡಿಯ ಕಟ್ಟಡವಾಗಿರುತ್ತದೆ. ಸದರಿ ಕಟ್ಟಡ ಆರ್.ಸಿಸಿ ಯದ್ದು ಆಗಿದ್ದು ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. 3 ನೇ ಅಂತಸ್ಥ ಸಹ ಆರ್. ಸಿಸಿ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 3 ನೇ ಮಹಡಿಯಲ್ಲಿ ಸೀಟ್ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದರ್ಶಿತ್ ಬಾರ್ ಆಂಡ್ಯ ರೇಸ್ಟೂರೇಂಟ್ ಕೊಡವತ್ತಿಯ ರಸ್ತೆಯಿಂದ 60 ಪಿಟ್ ಒಳಗಡೆ ಇರುತ್ತದೆ. ಬಾರಿನ ಬಾಗಿಲು ದಕ್ಷಿಣ ಬಾಗಕ್ಕೆ ಇರುತ್ತದೆ. ಬಾರಿನ ಬಾಗಿಲು ಉತ್ತರ ದಿಕ್ಕಿಗೆ ಇರುತ್ತದೆ ಎಂದರೆ ಸರಿಯಲ್ಲ. ಬಾರನ ಉತ್ತರದ ಬಾಗಿಲಿನಿಂದ ಪ್ರವೇಶ ಮಾಡಿದ್ದಲ್ಲಿ ಎಡಗಡೆ ಏನೀರುತ್ತದೆ ಎಂದರೆ ಸಾಕ್ಷಿ ನಾವು ಪಶ್ಚಿಮ ದಿಕ್ಕಿನಿಂದ ಹೋಗಿರುತ್ತೇವೆ ಕ್ಯಾಷಿಯರ್ ಕೌಂಟರ್ ನ ಎಡಬಾಗದಲ್ಲಿ ಅಡುಗೆ ಕೋಣೆ ಇರುತ್ತದೆ ಎಂದು ಹೇಳುತ್ತಾರೆ.

ಬಾರನಲ್ಲಿ ಸರಿ ಸುಮಾರು 5 ಟೇಬಲ್ ಇರುತ್ತದೆ. ಟೇಬಲ್‌ಗಳ ವಿಸ್ತೀರ್ಣ 3 X 4 ಆಗಿರುತ್ತದೆ. ಕ್ಯಾಷ ಕೌಂಟ್ 8 ಅಡಿ ಇದೆಯಾ ಎಂದರೆ ಸಾಕ್ಷಿ ಅಂದಾಜು 6 ಅಡಿ ಇರಬಹುದೆಂದು ಹೇಳುತ್ತಾರೆ. ಆ ದಿನ 1 ಟೇಬಲ್ ನಲ್ಲಿ ಮಾತ್ರ ಜನ ಕುಳಿತಿದ್ದರು. ನಾನು ಸುಳ್ಳು ಹೇಳುತ್ತಿದ್ದು 5 ಟೇಬಲ್ ಗಳಲ್ಲಿ 5 ಜನ ಕುಳಿತಿದ್ದು ಕೋವಿಡ 19 ಮಾರ್ಗ ಸೂಚಿಯನ್ನು ಪಾಲನೆ ಮಾಡುತ್ತಿದ್ದರು ಅಂಕಿ ಸಂಖ್ಯೆಗಳ ಲೆಕ್ಕಕ್ಕಾಗಿ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ದರ್ಶಿತ್ ಬಾರ್ ಆಂಡ್ಯ ರೇಸ್ಟೂರೇಂಟ್ ನಲ್ಲಿ ಎಷ್ಟು ಟೇಬಲ್ ಗಳು ಇವೆ ಎಂದು ನನಗೆ ಗೊತ್ತಿಲ್ಲ ಅಲ್ಲಿ 6 x 4 ರ 2 ಮತ್ತು 2 x 4 ರ ಎರಡು ಟೇಬಲ್ ಗಳು ಇವೆ ಎಂದರೆ ಸಾಕ್ಷಿ ಆ ದಿನ 5 ಟೇಬಲ್ ಗಳು ಇದ್ದವು ಎಂದು ಹೇಳುತ್ತಾರೆ. ಠಾಣಾ ಅಂಕಿ ಸಂಖ್ಯೆಗಳ ಲೆಕ್ಕಕ್ಕಾಗಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಕುಣಿಗಲ್